**ಓ ಎಸ್ ನಂಃ 477/2023**

**ಪಿ. ಡಬ್ಲ್ಯೂ ಃ 1**

**ದಿಃ 19.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ 2 ರಿಂದ 15 ರವರ ಪರ ಶ್ರೀ ಹೆಚ್ ಎನ್ ಎಸ್ ವಕೀಲರಿಂದ ಃ**

ನನಗೆ ಕನ್ನಡ ಓದಲು ಬರುತ್ತದೆ. ಆಂಗ್ಲ ಭಾಷೆ ಓದಲು ಬರುವುದಿಲ್ಲ. ನನಗೆ ಸಹಿ ಮಾಡಲು ಬರುವುದಿಲ್ಲ. ಈ ದಾವೆಯನ್ನು ನಾನು ನಮ್ಮ ತಂದೆಯ ಆಸ್ತಿಯ ಮೇಲೆ ಹಾಕಿರುತ್ತೇನೆ. ನನ್ನ ತಂದೆಯ ಹೆಸರು ಗಫುರ್ ಸಾಬ್. ನನ್ನ ತಂದೆ ಗಫುರ್ ಸಾಬ್ ರವರಿಗೆ 5 ಜನ ಮಕ್ಕಳು. ಅವರೆಂದರೆ ಮೊದಲನೇ ಪ್ಯಾರೇಲಾಲ್, ಎರಡನೇಯವರು ಬಾಬಾ, 3 ನೇಯವರು ಸಾಬ್ ಜಾನ್, 4 ನೇಯವರು ಚಾನ್ ಬೀ ಮತ್ತು ಕೊನೆಯದಾಗಿ ನಾನು ಒಬ್ಬನೇ ಜೀವಂತ ಇರುತ್ತೇನೆ. ವಂಶವೃಕ್ಷದಲ್ಲಿ ನಾವು 5 ಜನ ಇರುತ್ತೇವೆ ಎಂದು ಹೇಳಿ ಬರೆಸಿಲ್ಲ ಎಂದರೆ ಸರಿ.

ಅಮೀರ್ ಬಿ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಅಮೀರ್ ಬಿ ನನ್ನ ಅಕ್ಕನಾಗಬೇಕು. ಪ್ಯಾರೇಜಾನ್ ರವರು ತೀರಿಕೊಂಡಿರುತ್ತಾರೆ. ಅವರ ಹೆಂಡತಿಯು ತೀರಿಕೊಂಡಿರುತ್ತಾರೆ. ಪ್ಯಾರೇಜಾನ್ ರವರಿಗೆ ಇಬ್ಬರು ಮಕ್ಕಳು. ಅವರು ಆರೀಫ್ ಉಲ್ಲಾ ಮತ್ತು ಗಫುರ್ ಸಾಬ್ ಎಂದು ಇರುತ್ತಾರೆ. ಗಫುರ್ ಸಾಬ್ ರವರು ತೀರಿಕೊಂಡಿರುತ್ತಾರೆ. ಅವರ ಹೆಂಡತಿ ಇರುತ್ತಾರೆ. ಅವರ ಹೆಸರು ಶಾಹೀನಾಬಿ ಎಂದರೆ ಇರಬಹುದು. ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಂದು ಗಂಡು ಮಗ ಇರುತ್ತದೆ. ಅವರ ಇಬ್ಬರು ಹೆಣ್ಣು ಮಕ್ಕಳ ಹೆಸರು ಆನೀಸಾ ಮತ್ತು ನಸೀಮಾ ಮತ್ತು ಮಗನ ಹೆಸರು ತನ್ವೀರ್ ಎಂದರೆ ಇರಬಹುದು. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಗಫುರ್ ಸಾಬ್ ರವರ ಹೆಂಡತಿ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಿ ಪಿ 1 ರಲ್ಲಿ ಅವರ ಹೆಸರುಗಳನ್ನು ನಾನು ತಪ್ಪು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ತಂದೆಗೆ ಒಟ್ಟು 5 ಎಕರೆ ಜಮೀನು ಇತ್ತು. ಅವರಿಗೆ ಮನೆ, ನಿವೇಶನ ಎಲ್ಲವು ಇತ್ತು. ಐಟಂ ನಂಬರ್ 1 ರ ಸ್ವತ್ತಿನ ಪೂರ್ವಕ್ಕೆ ಮುಸ್ತಾಫ, ಪಶ್ಚಿಮಕ್ಕೆ ಚಿಕ್ಕ , ಉತ್ತರಕ್ಕೆ ಅನ್ವರ್ ಪಾಷ ಮತ್ತು ದಕ್ಷಿಣಕ್ಕೆ ಬಡ್ಡು ಸಾಬ್ ಇರುತ್ತಾರೆ. ನಾನು ನ್ಯಾಯಾಲಯಕ್ಕೆ ನೀಡಿರುವ ಐಟಂ ನಂಬರ್ 1 ರ ಚೆಕ್ ಬಂದಿ ಸರಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನು ಐಟಂ ನಂಬರ್ 1 ರ ಪೂರ್ವಕ್ಕೆ ಮುಸ್ತಾಫ್, ಪಶ್ಚಿಮಕ್ಕೆ ಎರಡನೇ ಐಟಂ ದಾವಾ ಸ್ವತ್ತು, ಉತ್ತರಕ್ಕೆ ದೊಡ್ಡ ಹನುಮಯ್ಯ

ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದರೆ ಸಾಕ್ಷಿ ರಸ್ತೆ ಇರುತ್ತದೆ ಎಂದು **ನುಡಿಯುತ್ತಾರೆ.**

**ಮುಂದುವರೆದ ಪಾಟೀ ಸವಾಲಿಗಾಗಿ ಹೆಚ್ ಎನ್ ಎಸ್ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**